

بسم اللهِ الرّحمٰن الرّحيم

# ತವಕ್ಕುಲ್ ಅಲಲ್ಲಾಹ್ ಕುರಿತು ಹಝ್ರ್‌ರತ್ ಮಸೀಹ್ ಮೌಊದ್(ಅ)ರ ಪವಿತ್ರ ಮಾದರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**(ಅಯ್ಯದಹುಲ್ಲಾಹ್), ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **02–10–2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ತಶಹ್ಹುದ್, ತಅವ್ವುಝ್ ಮತ್ತು ಸೂರತುಲ್ ಫಾತಿಹಾ ಓದಿದ ನಂತರ ಹುಝೂರ್ ಅನ್ವರ್ (ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್) ಹೀಗೆ ಹೇಳಿದರು:

ಹಝ್ರ್‌ರತ್ ಮಸೀಹ್ ಮೌಊದ್(ಅ)ರ ಆರಂಭಿಕ ಜೀವನದಿಂದಲೇ ಅಲ್ಲಾಹನ ಕೃಪೆ, ಅವರೊಂದಿಗೆ ಅಲ್ಲಾಹನ ವರ್ತನೆ ಮತ್ತು ಅವರ 'ತವಕ್ಕುಲ್ ಅಲಲ್ಲಾಹ್' ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಮೂವತ್ತು ವರ್ಷಗಳ ಹಿಂದೆ ನನ್ನ ತಂದೆ ತಮ್ಮ ಇಳಿ ವಯಸ್ಸಿನಲ್ಲಿ ಕಾಯಿಲೆ ಬಿದ್ದರು, ಆ ಕಾಯಿಲೆಯಲ್ಲಿ ಅವರ ಮರಣವು ನಿಶ್ಚಿತವಾಗಿತ್ತು. ಆ ದಿನ ಮಧ್ಯಾಹ್ನ ನನಗೆ ಹೀಗೊಂದು ದಿವ್ಯವಾಣಿ ಅವತೀರ್ಣವಾಯಿತು: **"ವಸ್ಸಮಾಯಿ ವತ್ತಾರಿಕ್"**, ಇದರ ಅರ್ಥ: ಆಕಾಶದ ಆಣೆ ಮತ್ತು ಸೂರ್ಯಾಸ್ತದ ಸಮಯದಲ್ಲಿ ಸಂಭವಿಸುವ ಆ ವಿಪತ್ತಿನ ಆಣೆ. ಇದರೊಂದಿಗೆ ಇದು ಅವರ ಮರಣದ ಕಡೆಗಿನ ಸೂಚನೆಯಾಗಿದೆ ಎಂದು ನನಗೆ ಮನವರಿಕೆ ಮಾಡಿಸಲಾಯಿತು. ವಾಸ್ತವದಲ್ಲಿ ಇದು ಅಲ್ಲಾಹನ ಕಡೆಯಿಂದ ಸಂತಾಪ ಸೂಚನೆಯಾಗಿತ್ತು.

ಹಝ್ರ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನನಗೆ ಈ ವಿಷಯ ತಿಳಿಸಲಾದಾಗ ಸ್ವಲ್ಪ ದುಃಖವಾಯಿತು. ಬದುಕಿದ್ದಾಗ ಸರ್ಕಾರದ ಕಡೆಯಿಂದ ಅವರು ಕೆಲವು ಸೌಲಭ್ಯಗಳನ್ನು ಪಡೆಯುತ್ತಿದ್ದರು, ಆದುದರಿಂದ 'ಈಗ ನಮ್ಮ ಮೇಲೆ ಬಡತನದ ದಿನಗಳು ಬರಬಹುದು' ಎಂಬ ಭಯ ನನ್ನ ಹೃದಯದಲ್ಲಿ ಮೂಡಿತು. ಆಗ ತಕ್ಷಣವೇ ಮಂಪರಿನ ಸ್ಥಿತಿಯಲ್ಲಿ ಹೀಗೆ ದಿವ್ಯವಾಣಿಯಾಯಿತು: **"ಅಲೈಸಲ್ಲಾಹು ಬಿಕಾಫಿನ್ ಅಬ್‌ದಹು"**, ಅಂದರೆ 'ಅಲ್ಲಾಹನು ತನ್ನ ಭಕ್ತದಾಸನಿಗೆ ಸಾಕಾಗಲಾರನೇ?'. ಈ ದಿವ್ಯವಾಣಿಯೊಂದಿಗೆ, ತೀವ್ರ ನೋವಿನ ಗಾಯವೊಂದು ಮುಲಾಮಿನಿಂದ ಗುಣಮುಖವಾದಂತೆ ನನ್ನ ಹೃದಯವು ಬಲವಾಯಿತು. ದಿವ್ಯವಾಣಿಯಿಂದ ಹೃದಯಕ್ಕೆ ನೆಮ್ಮದಿ ನೀಡುವ ಒಂದು ವಿಶೇಷ ಗುಣವಿದೆ ಎಂದು ಹಲವು ಬಾರಿ ಅನುಭವಕ್ಕೆ ಬಂದಿದೆ. ಅಂದರೆ, ಅಲ್ಲಾಹನು ಸಾಕು ಮತ್ತು ಯಾವುದೇ ವಿಷಯದ ಬಗ್ಗೆ ಚಿಂತಿಸುವ ಅಗತ್ಯವಿಲ್ಲ ಎಂಬ ದೃಢವಿಶ್ವಾಸ ಹಝ್ರ್‌ರತ್ ಮಸೀಹ್ ಮೌಊದ್(ಅ)ರಿಗೆ ಇತ್ತು.

ಹಝ್ರ್‌ರತ್ ಮಸೀಹ್ ಮೌಊದ್(ಅ) ಹೇಳಿದರು: ನನಗೆ ಈ ದಿವ್ಯವಾಣಿಯಾದ ತಕ್ಷಣವೇ, ದೇವನು ಖಂಡಿತವಾಗಿಯೂ ನನ್ನನ್ನು ಕೈಬಿಡುವುದಿಲ್ಲ ಎಂದು ನನಗೆ ಗೊತ್ತಾಯಿತು. ಆಗ ನಾನು ಖಾದಿಯಾನ್ ನಿವಾಸಿಯಾದ ಓರ್ವ ಹಿಂದೂ ಕ್ಷತ್ರಿಯನಾದ ಮಲಾವಾಮಲ್ ಎಂಬಾತನಿಗೆ ಈ ದಿವ್ಯವಾಣಿ ಬರೆದುಕೊಟ್ಟೆ ಮತ್ತು ಈ ಇಡೀ ಘಟನೆಯನ್ನು ವಿವರಿಸಿ ತಕ್ಷಣವೇ ಅಮೃತಸರಕ್ಕೆ ಕಳುಹಿಸಿದೆ; ಮುಹಮ್ಮದ್ ಶರೀಫ್ ಸಾಹಿಬ್ ಕಲಾನೌರಿಯರ ಮೂಲಕ ಒಂದು ಹರಳಿನಲ್ಲಿ ಮೊಹರು ರೂಪದಲ್ಲಿ ಕೆತ್ತಿಸಿ ಉಂಗುರ ಮಾಡಿಸಿಕೊಂಡು ಬರಲು ಹೇಳಿದೆ. ನಾನು ಆ ಹಿಂದೂವನ್ನು ಮತ್ತು ಮೌಲ್ವಿ ಮುಹಮ್ಮದ್ ಶರೀಫ್‌ರನ್ನು ಸಾಕ್ಷಿಯಾಗಿಸಲಿಕ್ಕಾಗಿ ಹೀಗೆ ಮಾಡಿದೆ. ಅದರಂತೆ ಮೌಲ್ವಿ ಸಾಹಿಬ್‌ರ ಮೂಲಕ ಈ ಉಂಗುರವು ಐದು ರೂಪಾಯಿಗಳಿಗೆ ತಯಾರಾಗಿ ನನ್ನ ಬಳಿಗೆ ತಲುಪಿತು. ಅದು ಇಂದಿಗೂ ನನ್ನ ಬಳಿ ಇದೆ. ಹುಝೂರ್ ಹೇಳಿದರು: ಅಲ್ಲಾಹನ ಕೃಪೆಯಿಂದ ಆ ಉಂಗುರ ಇಂದಿಗೂ ಹಸ್ತಾಂತರಗೊಂಡು ಬರುತ್ತಿದೆ.

ಹುಝೂರ್ ಹೇಳಿದರು: ಹಝ್ರ್‌ರತ್ ಮಸೀಹ್ ಮೌಊದ್(ಅ)ರಿಗೆ ಅಲ್ಲಾಹನ ಮೇಲೆ ಇದ್ದ ಭರವಸೆ ಮತ್ತು ಸತ್ಯತೆಯ ಮೇಲಿನ ದೃಢತೆಯನ್ನು ಅನ್ಯರು ಕೂಡ ಒಪ್ಪಿಕೊಳ್ಳುತ್ತಿದ್ದರು. ಮಲಿಕ್ ಸಲಾಹುದ್ದೀನ್ ಸಾಹಿಬ್(ರ) ವಿವರಿಸುತ್ತಾರೆ: ಒಂದು ಸಭೆಯಲ್ಲಿ ವ್ಯಕ್ತಿಯೊಬ್ಬ ಹಝ್ರ್‌ರತ್ ಮಸೀಹ್ ಮೌಊದ್(ಅ)ರ ವಿರೋಧವನ್ನು ಪ್ರಾರಂಭಿಸಿದಾಗ, ಅಹ್ಮದಿಯೇತರ ವಕೀಲರಾಗಿದ್ದ ಮತ್ತು ಕೊಲೆ ಯತ್ನ ಮೊಕದ್ದಮೆಯಲ್ಲಿ ಹಝ್ರ್‌ರತ್ ಮಸೀಹ್ ಮೌಊದ್(ಅ)ರ ವಕೀಲರಾಗಿದ್ದ ಮೌಲ್ವಿ ಫಜಲ್ ದೀನ್ ಸಾಹಿಬ್ ಅತ್ಯಂತ ಉತ್ಸಾಹದಿಂದ ಹೀಗೆ ಹೇಳಿದರು: "ನಾನು ಮಿರ್ಝಾ ಸಾಹಿಬ್‌ರ ಉನ್ನತ ವ್ಯಕ್ತಿತ್ವ ಮತ್ತು ನೈತಿಕತೆಯನ್ನು ಒಪ್ಪಿಕೊಳ್ಳುತ್ತೇನೆ. ನಾನು ಅನೇಕ ಹಿರಿಯ ಸಜ್ಜನರನ್ನು ನೋಡಿದ್ದೇನೆ, ಅವರು ಕಾನೂನು ಸಲಹೆಗಳ ಮೇರೆಗೆ ತಮ್ಮ ಹೇಳಿಕೆಗಳನ್ನು

ಬದಲಾಯಿಸಿಕೊಳ್ಳುತ್ತಿದ್ದರು, ಆದರೆ ಮಿರ್ಝಾ ಸಾಹಿಬ್‌ರನ್ನು ನಾನು ಸತ್ಯದ ಸ್ಥಾನದಿಂದ ಸ್ವಲ್ಪವೂ ಹಿಂದೆ ಸರಿಯದವರನ್ನಾಗಿ ಕಂಡೆ. ನಾನು ಮಾರ್ಟಿನ್ ಕ್ಲಾರ್ಕ್ ಮೊಕದ್ದಮೆಯಲ್ಲಿ ಒಂದು ಕಾನೂನು ಹೇಳಿಕೆಯನ್ನು ಸೂಚಿಸಿದೆ. ಆರೋಪಿಯ ಹೇಳಿಕೆಯು ಪ್ರಮಾಣವಚನದ ಆಧಾರದಲ್ಲಿ ಆಗಿರುವುದಿಲ್ಲ ಎಂದು ಹೇಳಿದೆ. ಆ ಹೇಳಿಕೆಯನ್ನು ಓದಿ, 'ಇದರಲ್ಲಂತೂ ಸುಳ್ಳಿದೆ, ಆರೋಪಿಗೆ ಸುಳ್ಳು ಹೇಳಲು ದೇವನು ಅನುಮತಿ ನೀಡಿಲ್ಲ' ಎಂದು ಮಿರ್ಝಾ ಸಾಹಿಬ್ ಹೇಳಿದರು. 'ನೀವೇಕೆ ಬೇಕೆಂತಲೇ ನಿಮ್ಮನ್ನು ಸಂಕಷ್ಟಕ್ಕೆ ಸಿಲುಕಿಸುತ್ತಿದ್ದೀರಿ?' ಎಂದು ನಾನು ಕೇಳಿದೆ. ಆದರೆ ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಹೇಳಿದರು: 'ನಾನು ಈ ಕಾನೂನು ಹೇಳಿಕೆಯನ್ನು ನೀಡಿ, ಅನ್ಯಾಯವಾದ ರೀತಿಯಲ್ಲಿ ಪ್ರಯೋಜನ ಪಡೆದು ನನ್ನ ದೇವನ ಕೋಪಕ್ಕೆ ತುತ್ತಾಗಬೇಕೇ? ಏನೇ ಆಗಲಿ ಇದು ಸಾಧ್ಯವಿಲ್ಲ. ನಿಮ್ಮ ವಕಾಲತ್ತಿನಿಂದ ನನಗೆ ಪ್ರಯೋಜನವಾಗುವುದು ಎಂದು ನಾನು ಭಾವಿಸಿಯೂ ಇಲ್ಲ. ನನ್ನ ಹೃದಯವನ್ನು ನೋಡುವ ದೇವನ ಮೇಲೆ ನನಗೆ ಭರವಸೆ ಇದೆ ಮತ್ತು ನಾನು ಅವನ ಮೇಲೆಯೇ ತವಕ್ಕುಲ್ ಮಾಡುತ್ತೇನೆ. ನನ್ನ ಹೇಳಿಕೆಯು ನಿಮ್ಮ ಈ ಕಾನೂನು ಹೇಳಿಕೆಗಿಂತ ಹೆಚ್ಚು ಪ್ರಭಾವಶಾಲಿಯಾಗಿರುವುದು. ಶಿಕ್ಷೆಯಾದರೂ ಸರಿ, ನಾನು ದೇವನಿಗೆ ಅವಿಧೇಯನಾಗಲಿಲ್ಲ ಎಂಬುದಕ್ಕೆ ನಾನು ಸಂತೋಷ ಪಡುವೆನು. ವಕಾಲತ್ತು ಕೇವಲ ಲೌಕಿಕ ವಿಷಯವಾಗಿದೆ, ಆದರೆ ಭರವಸೆ ಅಲ್ಲಾಹನ ಮೇಲಿಡಬೇಕು." ಆ ವಕೀಲ್ ಹೇಳುತ್ತಾರೆ: ಆಶ್ಚರ್ಯದ ವಿಷಯವೆಂದರೆ, ಹಝ್ರತ್ ಮಸೀಹ್ ಮೌಊದ್(ಅ) ಬಿಡುಗಡೆಗೊಂಡರು." ಅನ್ಯರು ಕೂಡ  ಹಝ್ರತ್ ಮಸೀಹ್ ಮೌಊದ್(ಅ)ರ ಸತ್ಯಸಂಧತೆಯಿಂದ ಪ್ರಭಾವಿತರಾಗದೆ ಇರಲಿಲ್ಲ.

ಹಝ್ರತ್ ಮುಫ್ತಿ ಮುಹಮ್ಮದ್ ಸಾದಿಕ್ ಸಾಹಿಬ್(ರ) ವಿವರಿಸುತ್ತಾರೆ, ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಹೇಳಿದರು: "ಇಂದಿನ ಜನರ ದೃಷ್ಟಿಯಲ್ಲಿ ಸಭ್ಯತೆ ಎಂದರೆ ಲೋಕದ ಹುಳುವಾಗುವುದು, ದೇವನನ್ನು ಮರೆಯುವುದು ಮತ್ತು ಲೌಕಿಕ ಸಾಧನಗಳ ಪೂಜೆಯಲ್ಲಿ ನಿರತರಾಗುವುದಾಗಿದೆ. ಆದರೆ ದೇವನ ದೃಷ್ಟಿಯಲ್ಲಿ ಸಭ್ಯತೆ ಎಂದರೆ, ಅಲ್ಲಾಹನ ಮೇಲೆ ಸಂಪೂರ್ಣ ಭರವಸೆ ಇರಿಸುವುದು ಮತ್ತು ಹೃದಯಕ್ಕೆ ನೈಜ ಪಾವಿತ್ರ್ಯತೆ ಲಭಿಸುವುದಾಗಿದೆ."

ಒಂದು ಸಭೆಯಲ್ಲಿ ಕೆಲವು ಕಾಯಿಲೆಗಳ ಪ್ರಸ್ತಾಪವಿತ್ತು. ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಹೇಳಿದರು: "ರೋಗಗಳಿಗೆ ದುಆದ ಮೂಲಕ ಗುಣಮುಖವಾಗುವ ವಿಷಯದಲ್ಲಿ ನನ್ನ ಹೃದಯದಲ್ಲಿರುವ ಸಂಪೂರ್ಣ ಅಭಿಪ್ರಾಯವನ್ನು ನನಗೆ ವ್ಯಕ್ತಪಡಿಸಲಿಕ್ಕೆ ಕೂಡ ಸಾಧ್ಯವಲ್ಲ. ವೈದ್ಯನು ಒಂದು ಮಿತಿಯವರೆಗೆ ಹೋಗುತ್ತಾನೆ, ನಂತರ ನಿಂತುಬಿಡುತ್ತಾನೆ ಮತ್ತು ನಿರಾಶನಾಗುತ್ತಾನೆ. (ಹುಝೂರ್ ಹೇಳಿದರು:) 'ಡಾಕ್ಟರ್ ಕೈಬಿಟ್ಟಿದ್ದಾರೆ' ಎಂದು ಈಗಲೂ ಅನೇಕರು ಪತ್ರ ಬರೆಯುತ್ತಾರೆ. ಆದರೆ ಅನಂತರ, ಜನರು ನಿಗದಿಪಡಿಸಿರುವ ಮಿತಿಗಳನ್ನು ಮೀರಿ ಪ್ರತೀಕ್ಷೆ ಮೂಡುವಂತೆ ದೇವನು ದುಆದ ಮೂಲಕ ದಾರಿ ತೆರೆಯುತ್ತಾನೆ, ಈ ರೀತಿಯಾಗಿ ಅಲ್ಲಾಹನ ಬಗ್ಗೆಗಿನ ಅರಿವು ಮೂಡಲು ಆರಂಭವಾಗುತ್ತದೆ." ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಲೋಕದ ಎಲ್ಲ ವೈದ್ಯರು ಕೂಡ ನಿರಾಶರಾಗಿ ಸಾವಿನ ತೀರ್ಪು ನೀಡಿದರೂ, ಸಾಕಷ್ಟು ಶ್ರದ್ಧೆಯಿಂದ ದುಆ ಮಾಡಿದರೆ ಅದು ಸ್ವೀಕಾರವಾಗಿ ಗುಣಮುಖವಾಗುವುದು ಎಂಬುದೇ ನನ್ನ ಅಭಿಪ್ರಾಯವಾಗಿದೆ."

ಹಝ್ರತ್ ಮೌಲ್ವಿ ಅಬ್ದುಲ್ ಕರೀಮ್ ಸಾಹಿಬ್ ಸಿಯಾಲ್ಕೋಟಿ(ರ)ರ ಅನಾರೋಗ್ಯಕ್ಕೆ ಸಂಬಂಧಪಟ್ಟು ಹಝ್ರತ್ ಮಸೀಹ್ ಮೌಊದ್(ಅ)ರ ತವಕ್ಕುಲ್‌ನ ವೈಭವವನ್ನು ಶೇಖ್ ಯಅ್‌ಕೂಬ್ ಅಲಿ ಇರ್ಫಾನಿ ಸಾಹಿಬ್(ರ) ಹೀಗೆ ವಿವರಿಸುತ್ತಾರೆ:

"ಮೌಲ್ವಿ ಸಾಹಿಬ್‌ರ ಅನಾರೋಗ್ಯದ ಸಮಯದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ತಮ್ಮ ಅಪಾರ ಪ್ರೀತಿ, ತ್ಯಾಗ ಹಾಗೂ ಅಲ್ಲಾಹನ ಮೇಲಿನ ಸಂಪೂರ್ಣ ವಿಶ್ವಾಸ ಮತ್ತು ಭರವಸೆಯ ಮಾದರಿಯನ್ನು ತೋರಿಸಿದರು. ಹಝ್ರತ್ ಮಸೀಹ್ ಮೌಊದ್(ಅ) ದೇವನ ಕಡೆಯಿಂದ ಆಗಮಿಸಿದವರು ಎಂಬುದಕ್ಕೆ, ದೇವನೊಂದಿಗೆ ಅವರಿಗೆ ನೈಜ ಸಂಬಂಧವಿದೆ ಎಂಬುದಕ್ಕೆ ಹಾಗೂ ರಸೂಲುಲ್ಲಾಹ್(ಸ)ರ ಮಾದರಿಯನ್ನು ಇಂದು ಉಮ್ಮತ್‌ನಲ್ಲಿ ಯಾರಾದರೂ ನೋಡಬಯಸಿದರೆ ಅದನ್ನು ತೋರಿಸಲು ಹಝ್ರತ್ ಮಸೀಹ್ ಮೌಊದ್(ಅ)ರನ್ನು ಹೊರತುಪಡಿಸಿ ಇಂದು ಲೋಕದಲ್ಲಿ ಬೇರಾರೂ ಇಲ್ಲ ಎಂಬುದಕ್ಕೆ ವಿವೇಚನಾಶೀಲರಿಗೆ ಇದು ಧಾರಾಳವಾದ ಸಾಕ್ಷಿಯಾಗಿದೆ."

ಹಝ್ರತ್ ಮಸೀಹ್ ಮೌಊದ್(ಅ) ಕೊನೆಯ ಕ್ಷಣದ ವರೆಗೂ ದುಆ ಮಾಡುತ್ತಿದ್ದರು. ಆದರೆ ಸಮಯ ಬಂದಾಗ ದೇವನ ಇಚ್ಛೆಯಲ್ಲಿ ಸಂತೃಪ್ತಗೊಂಡರು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಅಲ್ಲಾಹನು ನಿಗದಿಪಡಿಸಿರುವ ಮಾರ್ಗಗಳನ್ನು ಸಾಧ್ಯವಾದಷ್ಟು ಉಪಯೋಗಿಸುವುದು ಮತ್ತು ತದನಂತರ ಸ್ವತಃ ದುಆದಲ್ಲಿ ಮಗ್ನರಾಗಿ 'ದೇವನೇ ನೀನೇ ಇದರ ಅಂತ್ಯವನ್ನು ಒಳಿತಾಗಿಸು' ಎಂದು ಬೇಡುವುದೇ ತವಕ್ಕುಲ್ ಆಗಿದೆ. ಈ ಮಾರ್ಗಗಳು ಮತ್ತು ಸಾಧನಗಳನ್ನು ಕೂಡ ತಲೆಕೆಳಗಾಗಿಸುವಂತಹ ನೂರಾರು ವಿಪತ್ತುಗಳು ಮತ್ತು ಕಷ್ಟಗಳಿವೆ, ಅವುಗಳ ಹಾವಳಿಯಿಂದ ನಮ್ಮನ್ನು ರಕ್ಷಿಸಿ ಗುರಿಯನ್ನು ತಲುಪಿಸು ಎಂದು ಬೇಡಬೇಕು."

ಹಝ್ರತ್ ಸೈಯಿದ್ ಝೈನುಲ್ ಆಬಿದೀನ್ ಶಾಹ್ ಸಾಹಿಬ್(ರ) ವಿವರಿಸುತ್ತಾರೆ: ಪ್ರದೇಶದಲ್ಲಿ ಪ್ಲೇಗ್ ಕಾಣಿಸಿಕೊಂಡರೆ ತಕ್ಷಣವೇ ಹಝ್ರತ್ ಮಸೀಹ್ ಮೌಊದ್(ಅ) ತಮ್ಮ ಮನೆಯನ್ನು ಸ್ವಚ್ಛಗೊಳಿಸುವಂತೆ ಆದೇಶಿಸುತ್ತಿದ್ದರು, ಬೋರ್ಡಿಂಗ್ ಹೌಸನ್ನು ಸ್ವಚ್ಛಗೊಳಿಸಲಾಗುತ್ತಿತ್ತು ಮತ್ತು ಎಲ್ಲ ಸ್ನೇಹಿತರೊಡನೆ ತಮ್ಮ ಮನೆಗಳಲ್ಲಿ ಫಿನಾಯಿಲ್ ಬಳಸಲು ಮತ್ತು ಧೂಪ ಹಾಕಲು ಆದೇಶಿಸುತ್ತಿದ್ದರು. ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: "ಮಾರ್ಗಗಳನ್ನು ಮತ್ತು ಸಾಧನಗಳನ್ನು ಬಳಸುವುದು ಕೂಡ ಅಲ್ಲಾಹನ ಅನುಗ್ರಹಕ್ಕೆ ಕೃತಜ್ಞತೆ ಸಲ್ಲಿಸುವುದಾಗಿದೆ, ಸಾಧನಗಳನ್ನು ತ್ಯಜಿಸುವುದು ದೈವಿಕ ಶರೀಅತ್‌ಗೆ ವಿರುದ್ಧವಾಗಿದೆ. ತವಕ್ಕುಲ್‌ನ ಸ್ಥಾನ ನಂತರ ಬರುತ್ತದೆ. ಸಾಧನಗಳ ಹಿಂದೆ ದೇವನ ಕೈಯನ್ನು ನೋಡುವುದೇ ನೈಜ ಅರಿವಾಗಿದೆ."

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ದೇವನ ಸಾಮೀಪ್ಯ ಪಡೆದ ದಾಸರ ತವಕ್ಕುಲ್ ಕೂಡ ಒಂದು ಅದ್ಭುತಕರವಾದ ವೈಭವವನ್ನು ಹೊಂದಿರುತ್ತದೆ. ಒಂದೆಡೆ ಅವರು ಸಾಧನಗಳನ್ನು ಯಾವ ರೀತಿಯಲ್ಲಿ ಬಳಸುತ್ತಾರೆಂದರೆ, ಬಹುಶಃ ಇವರ ಸಂಪೂರ್ಣ ಭರವಸೆ ಕೇವಲ ಸಾಧನಗಳ ಮೇಲೆಯೇ ಇದೆ ಎಂದು ಲೌಕಿಕ ವ್ಯಕ್ತಿಯೊಬ್ಬ ಭಾವಿಸಲು ಪ್ರಾರಂಭಿಸುತ್ತಾನೆ. ಆದರೆ ಇನ್ನೊಂದೆಡೆ, ಅವರು ಸಾಧನಗಳನ್ನು ಅವುಗಳ ಅಗತ್ಯವೇ ಇಲ್ಲವೆಂಬಂತೆ ತ್ಯಜಿಸುತ್ತಾರೆ. ತವಕ್ಕುಲ್‌ನ ಈ ವೈಭವವು ಹಝ್ರತ್ ಮಸೀಹ್ ಮೌಊದ್(ಅ)ರ ಜೀವನ ಚರಿತ್ರೆಯಲ್ಲೂ ನಮಗೆ ಕಾಣಸಿಗುತ್ತದೆ. ಹಝ್ರತ್ ಮುಸ್ಲಿಹ್ ಮೌಊದ್(ರ) ವಿವರಿಸುತ್ತಾರೆ, ಹಝ್ರತ್ ಮಸೀಹ್ ಮೌಊದ್(ಅ)ರ ಮರಣದ ಎರಡು ಮೂರು ವರ್ಷಗಳ ಮುನ್ನ, ಹಝ್ರತ್ ಮಸೀಹ್ ಮೌಊದ್(ಅ)ರಿಗೆ ತೀವ್ರವಾದ ಕೆಮ್ಮು ಬಂದಿತ್ತು. ಆ ಸಮಯದಲ್ಲಿ ನನ್ನ ವಯಸ್ಸು ಸುಮಾರು 17 ವರ್ಷಗಳಾಗಿತ್ತು. ಅವರಿಗೆ ಔಷಧಿ ಕೊಡುವ ಜವಾಬ್ದಾರಿ ನನ್ನದಾಗಿತ್ತು. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ)ರ ಮದ್ದು ಹಾಗೂ ಇತರರ ಔಷಧಿಗಳನ್ನು ಕೂಡ ಬಳಸಲಾಗುತ್ತಿತ್ತು, ಆದರೆ ಕೆಮ್ಮು ಹೆಚ್ಚಾಗುತ್ತಲೇ ಇತ್ತು. ಇದು 1907ರ ಘಟನೆಯಾಗಿದೆ. ಅಬ್ದುಲ್ ಹಕೀಮ್ ಎಂಬ ಮುರ್ತದ್ ಹಝ್ರತ್ ಮಸೀಹ್ ಮೌಊದ್(ಅ)ರ ಕೆಮ್ಮಿನ ಬಗ್ಗೆ ತಿಳಿದು, 'ಹಝ್ರತ್ ಮಸೀಹ್ ಮೌಊದ್(ಅ) ಕ್ಷಯರೋಗಕ್ಕೆ ತುತ್ತಾಗಿ ಮರಣಹೊಂದುವರು' ಎಂದು ಬರೆದಿದ್ದನು. ಆದುದರಿಂದ ಅವನಿಗೆ ತಪ್ಪು ರೀತಿಯಲ್ಲಿ ಸಂತೋಷಪಡಲು ಯಾವುದೇ ನೆಪ ಸಿಗದಿರಲಿಕ್ಕಾಗಿ ನಾನು ಬಹಳ ಎಚ್ಚರಿಕೆ ವಹಿಸುತ್ತಿದ್ದೆ, ಕೆಲವು ಬಾರಿ ಎಷ್ಟು ದೀರ್ಘ ಸಮಯದ ವರೆಗೆ ಕೆಮ್ಮು ಇರುತ್ತಿತ್ತು ಎಂದರೆ, ಉಸಿರು ನಿಂತುಹೋಗುವುದು ಎಂದು ಭಾಸವಾಗುತ್ತಿತ್ತು. ಇಂತಹ ಪರಿಸ್ಥಿತಿಯಲ್ಲಿ ಹೊರಗಿನಿಂದ ಸ್ನೇಹಿತರೊಬ್ಬರು ಬಂದು ಉಡುಗೊರೆಯಾಗಿ ಹಣ್ಣುಗಳನ್ನು ತಂದರು, ನಾನು ಅವುಗಳನ್ನು ಹಝ್ರತ್ ಮಸೀಹ್ ಮೌಊದ್(ಅ)ರ ಮುಂದಿಟ್ಟೆ. ಹಝ್ರತ್ ಮಸೀಹ್ ಮೌಊದ್(ಅ) ಅದನ್ನು ನೋಡಿ, "ಅವರಿಗೆ ಜಝಾಕಲ್ಲಾಹ್ ಎಂದು ಹೇಳು" ಎಂದರು. ಅನಂತರ ಅವುಗಳಿಂದ ಬಾಳೆಹಣ್ಣನ್ನು ಎತ್ತಿಕೊಂಡರು. ಬಹುಶಃ ನನಗೆ ಪಾಠ ಕಲಿಸುವ ಉದ್ದೇಶದಿಂದ, "ಕೆಮ್ಮು ಇರುವಾಗ ಇದನ್ನು ತಿಂದರೆ ಏನಾಗಬಹುದು?" ಎಂದು ಕೇಳಿದರು. "ಇದು ಒಳ್ಳೆಯದಲ್ಲ" ಎಂದು ನಾನು ಹೇಳಿದೆ. ಆಗ ಅವರು ಮುಗುಳ್ನಕ್ಕು, ಸಿಪ್ಪೆ ಸುಲಿದು ತಿನ್ನಲು ಆರಂಭಿಸಿದರು. "ಕೆಮ್ಮು ಬಹಳ ತೀವ್ರವಾಗಿದೆ ಮತ್ತು ಕೆಮ್ಮಿನಲ್ಲಿ ಇದು ಒಳ್ಳೆಯದಲ್ಲ" ಎಂದು ನಾನು ಹೇಳಿದೆ. ಅವರು ಮುಗುಳ್ನಗುತ್ತಲೇ ಅದನ್ನು ಸುಲಿದು ತಿನ್ನುತ್ತಿದ್ದರು ಮತ್ತು ನಾನು ಅಜ್ಞಾನದಿಂದ 'ತಿನ್ನಬಾರದು' ಎಂದು ಪುನಃ ಒತ್ತಾಯಿಸಿದೆ. ಆಗ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: "ಕೆಮ್ಮು ವಾಸಿಯಾಯಿತು ಎಂದು ನನಗೆ ಈಗ ತಾನೇ ದಿವ್ಯವಾಣಿ ಅವತೀರ್ಣವಾಗಿದೆ. ವಾಸ್ತವದಲ್ಲಿ ಆ ಸಮಯದಲ್ಲಿ ಯಾವುದೇ ಔಷಧಿ ಬಳಸದೇ ಕೆಮ್ಮು ದೂರವಾಯಿತು. ಇದು ಕೇವಲ ದೈವಿಕ ಹಸ್ತಕ್ಷೇಪದಿಂದ ಉಂಟಾಯಿತು. ಹೀಗೆ ಆ ಕ್ಷಣದಿಂದಲೇ ಕೆಮ್ಮು ವಾಸಿಯಾಯಿತು. ಆ ಸಮಯದಲ್ಲಿ ಯಾವುದೇ ಔಷಧಿ ಬಳಸಿರಲಿಲ್ಲ ಮತ್ತು ಯಾವುದೇ ಪಥ್ಯವನ್ನು ಕೂಡ ಮಾಡಲಿಲ್ಲ, ಬದಲಾಗಿ ಅಪಥ್ಯವನ್ನೇ ಮಾಡಲಾಯಿತು, ಆದರೂ ಕೆಮ್ಮು ವಾಸಿಯಾಯಿತು. ಇದಕ್ಕೂ ಮುನ್ನ ಒಂದು ತಿಂಗಳ ಕಾಲ ಚಿಕಿತ್ಸೆ ನಡೆಯುತ್ತಿತ್ತು ಮತ್ತು ಕೆಮ್ಮು ವಾಸಿಯಾಗಿರಲಿಲ್ಲ ಎಂದಾದರೆ, ಇದು ದೈವಿಕ ಸಹಾಯದಿಂದಾಗಿದೆ. ಸಾಮಾನ್ಯವಾಗಿ ಅಪಥ್ಯದಿಂದ ಕಾಯಿಲೆಗಳೂ ಬರುತ್ತವೆ ಮತ್ತು ಚಿಕಿತ್ಸೆಯಿಂದ ಆರೋಗ್ಯವೂ ಲಭಿಸುತ್ತದೆ; ಆದರೆ ಅಲ್ಲಾಹನು ಇಚ್ಛಿಸಿದರೆ ಅವನು ಹಸ್ತಕ್ಷೇಪವನ್ನು ಮಾಡುತ್ತಾನೆ. ದುಆ ಎಂಬ ಅಸ್ತ್ರವನ್ನು ಅಲ್ಲಾಹನು ಮನುಷ್ಯನಿಗೆ ಕಲಿಸಿರುವುದೇ ಇದಕ್ಕಾಗಿ. ಅವನು ದೇವನ ಸನ್ನಿಧಿಗೆ ಹೋಗಿ, 'ನನಗೆ ನಿನ್ನಿಂದ ಸ್ವಾತಂತ್ರ್ಯ ಬೇಡ, ನನ್ನ ಪರಿಸ್ಥಿತಿಗಳಿಂದ ನಾನು ಬೇಸತ್ತಿದ್ದೇನೆ, ದಯವಿಟ್ಟು ನನ್ನ ವಿಷಯಗಳಲ್ಲಿ ನೀನು ಸ್ವತಃ ನನಗೆ ನೆರವಾಗು' ಎಂದು ದುಆ ಮಾಡಬೇಕು. 'ದಾಸನು ತವಕ್ಕುಲ್ ಮಾಡುತ್ತಿದ್ದಾನೆ ಮತ್ತು ಅವನ ವಿಷಯಗಳಲ್ಲಿ ನಾನು ಸಹಾಯ ಮಾಡಬೇಕೆಂದು ಬಯಸುತ್ತಿದ್ದಾನೆ' ಎಂದು ಅಲ್ಲಾಹನು ನೋಡುವಾಗ ಅವನು ಹಾಗೆಯೇ ಮಾಡುತ್ತಾನೆ. ಯಾವಾಗ ಅಲ್ಲಾಹನ ಮೇಲೆ ಸಂಪೂರ್ಣ ತವಕ್ಕುಲ್ ಇರಿಸಲಾಗುತ್ತದೆಯೋ ಆಗ ಇದು ಸಂಭವಿಸುತ್ತದೆ.

ಈ ಕುರಿತು ಮುಂದಿನ ಬಾರಿ ಇನ್ನಷ್ಟು ವಿವರಿಸುತ್ತೇನೆ. ಇನ್‌ಶಾ ಅಲ್ಲಾಹ್.

ಖುತ್ಬದ ಕೊನೆಯಲ್ಲಿ ಹುಝೂರ್ ಮೂವರು ದಿವಂಗತರ ಬಗ್ಗೆ ಪ್ರಸ್ತಾಪಿಸಿದರು. ಅವರ ಮಗ್‌ಫಿರತ್‌ಗಾಗಿ ದುಆ ಮಾಡಿದರು ಹಾಗೂ ಅವರ ಜನಾಝಾ ಗಾಯಬ್ ನಮಾಝ್ ನಿರ್ವಹಿಸುವುದಾಗಿ ಹೇಳಿದರು.

——————————****——————————

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis***[atba]

At, ***'Masjid Mubarak',*** *Islamabad, Tilford,* U.K. On 02-10-2026

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon